**ದಿನಾಂಕಃ 06-12-2021 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

-

**ಮುಂದೂವರೆದ ಪಾಟೀ ಸವಾಲು ಶ್ರೀ ಎಸ್ ಎ ಕೆ ವಕೀಲರಿಂದಃ ಎದುರುದಾರರ ಪರ**

5. ನನಗೆ ಮೊದಲನೇ ಗಂಡನಿಂದ 1 ಹೆಣ್ಣು ಮಗು ಇದೆ. ಅವಳಿಗೆ ಈಗ ಮದುವೆಯಾಗಿ 3 ಮಕ್ಕಳಾಗಿದ್ದು ಗಂಡನ ಮನೆಯಲ್ಲಿದ್ದಾನೆ. ನನ್ನ 2 ನೇ ಗಂಡನ ಹೆಸರು ಫಜಲು ರೋಫ್ಖಾನ್ . ನನಗೆ 2 ನೇ ಗಂಡನಿಂದ 3 ಮಕ್ಕಳು ಇರುತ್ತಾರೆ. ಅವರಲ್ಲಿ ಇಬ್ಬರು ಗಂಡು ಮಕ್ಕಳು, ಒಂದು ಹೆಣ್ಣು ಮಗು. ಗಂಡು ಮಕ್ಕಳ ವಯಸ್ಸು ಒಬ್ಬನದು 27 , ಇನ್ನೊಬ್ಬನದು 22 ಇದೆ. ಹೆಣ್ಣು ಮಗಳದ್ದು ಸಹ ಮದುವೆಯಾಗಿ ಅವಳಿಗೂ 3 ಮಕ್ಕಳು ಇವೆ. ನನ್ನ ಹಿರಿಯ ಮಗ ಟೈಲ್ಸ ಜೋಡಿಸುವ ಕೆಲಸ, ಸಣ್ಣವ ಪೇಂಟಿಂಗ್ ಕೆಲಸ ಮಾಡುತ್ತಾರೆ. ನಂತರ ಸಾಕ್ಷಿ ಇಬ್ಬರು ಗಂಡು ಮಕ್ಕಳು ನನ್ನನ್ನು ಬಿಟ್ಟು ಬೇರೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ರೇಷನ್ ಕಾರ್ಡನಲ್ಲಿ ಇಬ್ಬರೂ ಗಂಡು ಮಕ್ಕಳ ಹೆಸರು ಇದೆ ಆದರೆ ಯಾವತ್ತೂ ಅವರು ರೇಷನ್ ತೆಗೆದುಕೊಂಡು ಹೋಗಲು ಬಂದಿಲ್ಲ. ರೇಷನ್ ಕಾರ್ಡ ಹಾಜರು ಮಾಡಲು ನನಗೆ ಯಾವುದೇ ತೊಂದರೆ ಇಲ್ಲ. ನನ್ನ ಮಕ್ಕಳು ನನ್ನೊಂದಿಗೆ ಇದ್ದರೂ ಸಹ ಬಿಟ್ಟು ಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಬಳಿ ರೂ 1 ಲಕ್ಷ ಹಣ ಇತ್ತು ಎಂದು ತೋರಿಸಲು ಸಂಘದ ರಸೀದಿ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ.

6. ಎದುರುದಾರನು ಲೇತ್ ಮಶೀನ್ ಕೆಲಸ ಮಾಡುತ್ತಾನೆ ಎಂದು ತೋರಿಸಲು ದಾಖಲಾತಿಗಳು ಇಲ್ಲ. ಲೇತ್ ಮಶೀನ್ ಹಾಕಲು ಸಂಬಂಧಪಟ್ಟ ಇಲಾಖೆಯಿಂದ ಪರವಾನಿಗೆ ಮತ್ತು ವಿದ್ಯುತ್ ಶಕ್ತಿ ಪಡೆಯಲು ಸಂಬಂಧಪಟ್ಟ ಕೆ ಇ ಬಿ ರವರಿಂದ ಪರವಾನಿಗೆ ಬೇಕಾಗುತ್ತದೆ

ಎಂದರೆ ಗೊತ್ತಿಲ್ಲ. ಎದುರುದಾರರು ಯಾವುದೇ ಲೇತ್ ಮಶೀನ್ ಕೆಲಸ ಮಾಡುವುದಿಲ್ಲ, ನಾನು



ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿರಾಳಕೊಪ್ಪದಲ್ಲಿ ಮಂಡಕ್ಕಿ ರಾಜಣ್ಣ ರವರಿಗೆ ಸೇರಿದ ಮನೆಯಲ್ಲಿ 2 ವರೆ ವರ್ಷ ಬಾಡಿಗೆ ಇದ್ದ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಎದುರುದಾರನೊಂದಿಗೆ ನಾನು 2 ವರೆ ವರ್ಷ ಶಿರಾಳಕೊಪ್ಪದಲ್ಲಿ ಮಂಡಕ್ಕಿ ರಾಜಣ್ಣ ರವರಿಗೆ ಸೇರಿದ ಮನೆಯಲ್ಲಿ ಬಾಡಿಗೆ ಇದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 12-12-2018 ರಂದು ಎದುರುದಾರ ನನ್ನನ್ನು ಶಿರಾಳಕೊಪ್ಪದ ಮನೆಯಿಂದ ಹೊರಗೆ ಹಾಕಿರುತ್ತಾನೆ. ದಿನಾಂಕವನ್ನು ಅರ್ಜಿಯಲ್ಲಾಗಲಿ, ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿಯಾಗಲಿ ಬರೆಸಿಲ್ಲ ಎಂದರೆ ಸರಿ. ಶಿರಾಳ ಕೊಪ್ಪದ ಪೋಲೀಸ್ ಠಾಣೆಗೆ ನಾನು ದೂರನ್ನು ದಿಃ 12-09-2018 ರಂದು ಕೊಟ್ಟಿರುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಎದುರುದಾರ ನನ್ನನ್ನು ಯಾವುದೇ ಸಮಯಕ್ಕೊ ಹೊಡೆ ಬಡಿ ಮಾಡಿಲ್ಲ, ನಾನು ಯಾವುದೇ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಹಣವನ್ನು ಪಡೆಯುವ ಸಲುವಾಗಿ ಎದುರುದಾರನಿಗೆ ಬ್ಲಾಕ್ ಮೇಲ್ ಮಾಡಿ, ನಾನೇ ಎದುರುದಾರನಿಗೆ ಹೊಡಿ ಬಡಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

7. ನಾನು ರಾಣೇಬೆನ್ನೂರಿನ ಪೋಲೀಸ್ ಠಾಣೆಯಲ್ಲಿ ಎದುರುದಾರನ ವಿರುದ್ಧ ದೂರು ಕೊಟ್ಟಿದ್ದೇನೆ ದಿನಾಂಕ ನೆನಪಿಲ್ಲ. ದೂರು ಕೊಟ್ಟ ನಂತರ ಎದುರುದಾರನೊಂದಿಗೆ ನಾನು ಹೋಗಿ ಜೀವನ ಮಾಡಿರುತ್ತೇನೆ. ನಾನು ಎದುರುದಾರನೊಂದಿಗೆ ಯಾವತ್ತೂ ಗಂಡ-ಹೆಂಡತಿ ಯಾಗಿ ಜೀವನ ಮಾಡಿಲ್ಲ ಎಂದರೆ ಸರಿಯಲ್ಲ. ಪಾತೀಮ್ ಉನ್ನಿಸಾ ಎಂದರೆ ಎದುರುದಾರನ ಹೆಂಡತಿ. ಎದುರುದಾರನಿಗೆ 3 ಜನ ಮಕ್ಕಳು. ಮಕ್ಕಳು ಏನು ಓದುತ್ತಿದ್ದಾರೆ

ನನಗೆ ಗೊತ್ತಿಲ್ಲ. ಎದುರುದಾರರ ಮನೆ ರಾಣೇಬೆನ್ನೂರಿನ ಅಡವಿ ಆಂಜನೇಯ ನಗರ, 6 ನೇ ಕ್ರಾಸ್ ನಲ್ಲಿ ಇದೆ.

-12-

ನಾನು ರಾಣೇಬೆನ್ನೂರಿನ ಕೋರ್ಟ ಹಿಂಭಾಗದಲ್ಲಿ ಬಾಡಿಗೆ ಇದ್ದೇನೆ. ನಾನು ತಹಶೀಲ್ದಾರ್ ಕಚೇರಿಯಿಂದ  ವಿಧವಾ ವೇತನ ಪಡೆಯುತ್ತಿದ್ದೇನೆ ಎಂದರೆ 3 ತಿಂಗಳ ಹಿಂದಿನ ವರೆಗೂ ತೆಗೆದುಕೊಳ್ಳುತ್ತಿದ್ದೆ, ಎದುರುದಾರರು ಅದನ್ನು ಬಂದ್ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಈಗ ನಾನು ನೋಡುತ್ತಿರುವ ದಾಖಲಾತಿ ನಾನು ವಿಧವಾ ವೇತನ ಪಡೆಯುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ನೀಡಿದ ಸ್ಟೇಟಸ್ ಇರುತ್ತದೆ ಎಂದರೆ ಸಾಕ್ಷಿ ಅದರಲ್ಲಿ ನನ್ನ ಪೋಟೋ ಇರುವುದಿಲ್ಲ, ಹಾಗಾಗಿ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನಜರುನ್ನೀಸಾ ಗಂಡ ಮುನಿರಹಮದ್ ಕಾಜಿ ಎನ್ನುವ ಹೆಸರು ನನಗೆ ಸಂಬಂಧಸಿದ್ದು ಎಂದರೆ ಸರಿ. ವಿಧವಾ ವೇತನವನ್ನು ನಾನು ಪೋಸ್ಟ ಇಲಾಖೆ ಮೂಲಕ ಪಡೆಯುತ್ತಿದ್ದೆ. ಪೋಸ್ಟ ಇಲಾಖೆಯವರು ನನಗೆ ಹಣವನ್ನು ಕೊಟ್ಟು ನನ್ನ ಸಹಿ ಪಡೆದುಕೊಂಡು ಹೋಗುತ್ತಿದ್ದರು. ಕಳೆದ 4 ತಿಂಗಳಿನಿಂದ ನಾನು ವಿಧವಾ ವೇತನವನ್ನ ಪಡೆಯುತ್ತಿಲ್ಲ. ನನ್ನದು ಮರು ಮದುವೆಯಾಗಿದೆ ಹೀಗಾಗಿ ವಿಧವಾ ವೇತನಾ ಬಂದ್ ಮಾಡಬೇಕು ಎಂದು ತಹಶೀಲ್ದಾರ್ ಕಚೇರಿಗೆ ಯಾವುದೇ ಅರ್ಜಿ ಕೊಟ್ಟಿಲ್ಲ. ಆದರೆ ಎದುರುದಾರರು ವಿಧವಾ ವೇತನವನ್ನು ಬಂದ್ ಮಾಡಿಸಿದ್ದಾಗ ನಾನೇ ಚಾಲ್ತಿ ಮಾಡಿಸಿದ್ದೇನೆ. 2 ನೇ ಗಂಡನಿಂದ ಡೈವರ್ಸ ಆಗಿದೆ ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ನಾನು 2 ನೇ ಗಂಡನಿಂದ ಡೈವರ್ಸ ಪಡೆದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸದೇ ಇದ್ದರೂ ಸಹ ಹಾಜರು ಪಡಿಸಿದ್ದೇನೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ರೀತಿ ಹಣ



ಪಡೆಯುವ ದುರುದ್ದೇಶದಿಂದ ಎದುರುದಾರನ ಮೇಲೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.